ಲಭ್ಯವಿರುವ ಮಾಹಿತಿಯ ಪ್ರಕಾರ ಕಳೆದ ಮೂರು ವರ್ಷಗಳಿಂದ ಖಾಲಿಯಿರುವ ಹುದ್ದೆಗಳ ಬಗ್ಗೆ ವರ್ಗ ಮತ್ತು ವರ್ಷವಾರು ವಿವರಗಳನ್ನು ಈ ಕೆಳಗೆ ಸೂಚಿಸಲಾಗಿದೆ.

ವರ್ಗಗಳು	ಖಾಲಿಯಿರುವ ಹುದ್ದೆಗಳ ಸಂಖ್ಯೆ		
	ಮೂರು ವರ್ಷಗಳು	ಎರಡು ವರ್ಷಗಳು	ಒಂದು ವರ್ಷ/ ಅದಕ್ಕೂ ಕಡಿಮೆ ಅವಧಿ
ಗ್ರೂಪ್ 'ಎ'	೨೪೨	೩೨	೧೮೯
ಗ್ರೂಪ್ 'ಬಿ'	೬೩೬	೯೫	೪೧೦
ಗ್ರೂಪ್ 'ಸಿ'	೧೫,೬೪೩	೩,೮೨೧	೪೬೩೨
ಗ್ರೂಪ್ 'ಡಿ'	೨,೭೩೯	೮೩೦	೩೪೩೧

(ಆ) ೧೯೮೫ರಿಂದ ಭರ್ತಿ ಮಾಡಿರುವ ಹುದ್ದೆಗಳ ಬಗ್ಗೆ ವರ್ಷವಾರು ವಿವರಗಳು ಈ ಕೆಳಕಂಡಂತಿವೆ.

೧೯೮೫-೮೬	೩೦,೧೫೪
೧೯೮೬-೮೭	೧೦,೧೦೨
೧೯೮೭-೮೮	೬,೭೫೭

(ವರ್ಗವಾರು ವಿವರಗಳು ಲಭ್ಯವಿಲ್ಲ)

(ಇ) ಇಲ್ಲ.

ಶ್ರೀ ಬಿ. ಎಸ್. ಯಂಕಾನಾಯಕ್.—ಮಾನ್ಯ ಮುಖ್ಯಮಂತ್ರಿಗಾರವರು ಒಟ್ಟು ಹುದ್ದೆಗಳ ಸಂಖ್ಯೆ ಮತ್ತು ವರ್ಗವಾರು ವಿವರಗಳನ್ನು ಹೇಳಿದ್ದಾರೆ. ಇನ್ನೂ ಖಾಲಿಯಿರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ? ಇದರಲ್ಲಿ ಎಷ್ಟು ಜನ ಎಸ್.ಸಿ. ಮತ್ತು ಎಸ್.ಟಿ. ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ದಯವಿಟ್ಟು ತಿಳಿಸಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ಒಟ್ಟು ೬೫ ಸಾವಿರ ವಿವಿಧ ವರ್ಗಗಳ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಜನಾಂಗ ದವರಿಗೆ ರಾಜ್ಯಾಂಗ ಪ್ರಕಾರ ಮತ್ತು ಕಾನೂನಿನ ಪ್ರಕಾರ ಎಷ್ಟು ಹುದ್ದೆಗಳು ಹೋಗಬೇಕಾಗಿತ್ತೋ ಅಷ್ಟು ಹುದ್ದೆಗಳನ್ನು ಅವರಿಗೆ ಕೊಟ್ಟಿದ್ದೇವೆ.

ಚುಕ್ಕೆ ಗುರುತಿನ ಪ್ರಶ್ನೆ ಕ್ರಮಾಂಕ ೬೪೭ ಮಾನ್ಯ ಸದಸ್ಯರು ಗೈರುಹಾಜರಿ.

ಹೆಗ್ಗಡದೇವನಕೋಟೆಯಲ್ಲಿ ಜನರಲ್ ಆಸ್ಪತ್ರೆ ಕಟ್ಟಡ

೧೬೪೪. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಹೆಗ್ಗಡದೇವನಕೋಟೆಯಲ್ಲಿ ಜನರಲ್ ಆಸ್ಪತ್ರೆಯ ಕಟ್ಟಡವನ್ನು ಕಟ್ಟಲಾಗುತ್ತಿದೆಯೇ ?

(ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಯಿತು; ಇದಕ್ಕೆ ತಗುಲಿರುವ ವೆಚ್ಚವೆಷ್ಟು ?

(ಇ) ಸದರಿ ಕಟ್ಟಡದ ಕಾಮಗಾರಿಯು ವಿಳಂಬವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಈ) ಹಾಗಿದ್ದಲ್ಲಿ, ಇದನ್ನು ಪೂರ್ಣಗೊಳಿಸುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳು ಏನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

(ಅ) ಹೌದು

(ಆ) ನವೆಂಬರ್ ೧೯೮೫ರಲ್ಲಿ ಪ್ರಾರಂಭಿಸಲಾಯಿತು. ೧೯೮೮ರ ಮಾರ್ಚಿ ಅಂತ್ಯದವರೆಗೆ ೩೨.೫೬ ಲಕ್ಷ ರೂಪಾಯಿಗಳು ವೆಚ್ಚವಾಗಿವೆ.

(ಇ) ಬಂದಿದೆ.

(ಈ) ಕಟ್ಟಡದ ಸಿವಿಲ್ ಕೆಲಸ ಪೂರ್ಣಗೊಂಡಿದೆ. ವಿದ್ಯುದೀಕರಣ ಕೆಲಸವು ಪ್ರಗತಿಯಲ್ಲಿದೆ. ೫-೬ ತಿಂಗಳಲ್ಲಿ ಕೆಲಸ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಸಚಿವರು ಉತ್ತರದಲ್ಲಿ ೨೨ರಲ್ಲಿ ಈ ಆಸ್ಪತ್ರೆ ಕಟ್ಟಡ ಪ್ರಾರಂಭವಾಗಿ ೩೨.೫೬ ಲಕ್ಷ ರೂಪಾಯಿಗಳು ವೆಚ್ಚವಾಗಿದ್ದು, ಇದರ ಕೆಲಸ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗೆ ವಿಳಂಬವಾಗಲು ಕಾರಣಗಳೇನು? ಕೊನೆಯ ಉತ್ತರದಲ್ಲಿ ಸಿವಿಲ್ ಕೆಲಸ ಪೂರ್ಣಗೊಂಡಿದ್ದು ವಿದ್ಯುತ್ ಕೆಲಸ ಮುಕ್ತಾಯವಾಗಿದೆ ಎಂದು ಹೇಳಿದ್ದಾರೆ. ಮತ್ತು ಇನ್ನು ೬ ತಿಂಗಳಲ್ಲಿ ಕೆಲಸ ಪೂರ್ಣ ಮಾಡಿಯಾವುದಾಗಿ ಹೇಳಿದ್ದಾರೆ. ನಾನು ಕಳೆದ ಮೂರು ವರ್ಷಗಳಿಂದ ಸದನದಲ್ಲಿ ಪ್ರಶ್ನೆ ಕೇಳಿದಾಗಲೆಲ್ಲಾ ಇನ್ನು ಒಂದು ತಿಂಗಳಲ್ಲಿ, ಎರಡು ತಿಂಗಳಲ್ಲಿ ಪೂರ್ಣಗೊಳ್ಳುವುದೆಂದು ಉತ್ತರ ಬಂದಿತ್ತು. ಹೀಗೆ ವಿಳಂಬವಾಗಲು ಕಾರಣಗಳೇನು? ಅಲ್ಲದೆ ವಿದ್ಯುದೀಕರಣವಾಗಿದ್ದರೂ ಕಳಪೆ ವೈರ್‌ಗಳನ್ನು ಉಪಯೋಗಿಸಲಾಗಿದೆ. ಕೆಲವು ಕಡೆ ಕಟ್ಟಡ ಬಿರುಕು ಬಿಡುತ್ತಿದೆ. ಇದು ಸರ್ಕಾರಕ್ಕೆ ತಿಳಿದಿದೆಯೇ?

ಶ್ರೀ ಬಿ. ರಾಚಯ್ಯ.—ನಾನು ಅಲ್ಲಿಗೆ ಹೋಗಿ ಪರಿಶೀಲನೆ ಮಾಡಿ ಬಂದಿದ್ದೇನೆ. ಕಂಟ್ರಾಕ್ಟರ್‌ಗೆ ಹಳೇ ಬಾಕಿ ಕೊಡಲಿಲ್ಲ ಎಂದು ಪೂರ್ಣಗೊಳಿಸುವ ಕೆಲಸ ನಿಲ್ಲಿಸಿದ್ದರೆಂದು ತಿಳಿದು ಬಂತು. ಈಗ ಜಿಲ್ಲಾ ಪರಿಷತ್‌ನವರು ಒಂದು ಲಕ್ಷ ರೂಪಾಯಿ ಕೊಡಲು ಮುಂದೆ ಬಂದಿರುವುದರಿಂದ ಇನ್ನಾರು ತಿಂಗಳಲ್ಲಿ ಇದನ್ನು ಮುಗಿಸಲಾಗುವುದು. ಇನ್ನು ಕಳಪೆ ವೈರ್‌ಗಳನ್ನು ಸರಿಪಡಿಸುವಂತೆ ಮಾಡಲು ಜಿಲ್ಲಾ ಪರಿಷತ್ ಚೀಫ್ ಸೆಕ್ರೆಟರಿಯವರಿಗೆ ತಿಳಿಸಿದ್ದೇನೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಸಚಿವರಲ್ಲಿ ಪೂರ್ಣ ಮಾಹಿತಿ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ೨೨ರಲ್ಲಿ ಪ್ರಾರಂಭವಾದ ಕಟ್ಟಡದಲ್ಲಿ ಅನೇಕ ಕಡೆ ಬಿರುಕು ಬಂದಿದೆ, ಇದರಿಂದ ಕಟ್ಟಡ ಬೀಳುವ ಸಂಭವವಿರುವುದರಿಂದ ೩೭ ಲಕ್ಷ ರೂಪಾಯಿಗಳ ಈ ಕಟ್ಟಡವನ್ನು ಎಷ್ಟರಮಟ್ಟಿಗೆ ಕಟ್ಟಿದ್ದಾರೆ ಹಿಂದಿನ ಅಭಿಯಂತರರು ಎಂಬ ಬಗ್ಗೆ ಪೂರ್ಣ ತನಿಖೆ ಮಾಡಿಸುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ನಾನು ಹೋಗಿದ್ದಾಗ ಕೆಲವು ಕಡೆ ಹಾಸಿಗೆಯ ಕೆಳಗಡೆ ಪ್ಲೇಟ್‌ಗಳನ್ನು ಹಾಕುತ್ತಿದ್ದರು ಹಾಗೇ ವೈರ್‌ಗಳನ್ನೂ ಹಾಕುತ್ತಿದ್ದರು. ಈಗ ಜಿಲ್ಲಾ ಪರಿಷತ್ತಿನ ಚೀಫ್ ಸೆಕ್ರೆಟರಿಯವರಿಗೆ ಪರ್ಸನಲಾಗಿ ಹೋಗಿ ಕೆಲಸವನ್ನು ಪರೀಕ್ಷೆ ಮಾಡಲು ತಿಳಿಸುತ್ತೇನೆ.

ಶ್ರೀ ಎಂ. ಶಿವಣ್ಣ.—ಇದು ನಮ್ಮ ಹೆಚ್ಚಿನ ಕೋಟೆ ತಾಲ್ಲೂಕಿನಲ್ಲೇ ಒಂದು ಸುಸಜ್ಜಿತ ಆಸ್ಪತ್ರೆಯಾಗಬೇಕಾಗಿತ್ತು. ಆದರೆ ಅದು ಕುಸಿಯುವ ಹಂತಕ್ಕೆ ಈಗಲೇ ಬಂದಿದೆ. ಆದ್ದರಿಂದ ಅದರ ಬಗ್ಗೆ ತನಿಖೆ ಮಾಡಿಸಿ ರಿಪೋರ್ಟ್ ತೆಗೆದುಕೊಂಡು ಆಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಬಿ. ರಾಚಯ್ಯ.—ಸದರಿ ಕಟ್ಟಡದ ಭದ್ರತೆ ಬಗ್ಗೆ ಚೀಫ್ ಇಂಜಿನಿಯರ್, ಜಿಲ್ಲಾ ಪರಿಷತ್‌ಗೆ ಪತ್ರ ಬರೆಯುತ್ತೇನೆ.

ಜಾಗೃತ ತನಿಖಾ ದಳವು ವ್ಯಾಪಾರಿಗಳ ಮನೆ ಪರಿಶೋಧಿಸಿರುವ ಬಗ್ಗೆ

೭೪೯ ೧೯೦೪ ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಚಿಕ್ಕಮಗಳೂರು ಜಿಲ್ಲೆಯ ಆಹಾರ ಇಲಾಖೆಯ ಜಾಗೃತ ತನಿಖಾ ದಳವು ಹಠಾತ್ ವ್ಯಾಪಾರಿಗಳ ಮನೆ ಪರಿಶೋಧಿಸಲು ಹೋಗಿ ವ್ಯಾಪಾರಿಗಳಿಗೆ ಇಲ್ಲದ ಕಿರುಕುಳ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?